ಎಂದು ಮನಸ್ಸಿನಲ್ಲೇ ಹೇಳಿಕೊಂಡರು. ಅಷ್ಟರಲ್ಲಿ ಗೇಟು ತೆರೆದ ಸದ್ದಾಯಿತು. ಕೆಲವು ಹುಡುಗರು ಒಳಕ್ಕೆ ಹೋಗುವುದೋ, ಬೇಡವೋ ಎಂದು ಅನುಮಾನಿಸುತ್ತ ಅಲ್ಲೇ ನಿಂತಿದ್ದರು. ಒಳಕ್ಕೆ ಬರುವಂತೆ ಅವರಿಗೆ ಸಂಜ್ಞೆ ಮಾಡಿದರು.

ಹತ್ತಿರಕ್ಕೆ ಬಂದ ಹುಡುಗರು ಅಭಿನಂದನೆಗಳು ಸಾರ್ ಎಂದರು. ಸಾಹಿತ್ಯಸಿರಿ ಪ್ರಶಸ್ತಿಗೆ ನಿಮ್ಮ ಹೆಸರು ಶಿಫಾರಸು ಆಗಿದೆ ಅನ್ನೋದು ಗೊತ್ತಾಯ್ತು. ಪ್ರಶಸ್ತಿ ಘೋಷಣೆ ಆಗುವ ಮೊದಲೇ ನಿಮಗೆ ಅಭಿನಂದನೆ ಹೇಳೋಣ ಅಂತ ಬಂದ್ವಿ ಅಂದರು.

ಸರ್, ನಿಮ್ಮ ಕಾದಂಬರಿಗಳನ್ನು ಓದಿದ್ದೀವಿ. ಭಾಷಣ ಕೇಳಿದ್ದೀವಿ. ನೀವು ನಮ್ಮ ಮೆಚ್ಚಿನ ಲೇಖಕರು ಎಂದು ಒಬ್ಬ ಹೇಳಿದ.

ಪ್ರಭುದೇವರಿಗೆ ಸಂತೋಷವಾಯಿತು. ತೋರಿಸಿಕೊಳ್ಳದೆ ನಕ್ಕರು. ಹೊಸದಾಗಿ ಏನು ಬರೆದಿರಿ ಸಾರ್? ಎಂಬ ಪ್ರಶ್ನೆಗೆ ಆತ್ಮಕಥೆ ಬರೀಬೇಕು ಅಂದ್ಕಂಡಿದ್ದೀನಿ ಅಂದರು.

‘ಸರ್, ನಿಮ್ಮ ಅಗ್ನಿಪಥ ಕಾದಂಬರಿ ಸಿನಿಮಾ ಆಗಿದೆ. ಅದರ ಬಗ್ಗೆ ನೀವು ಇನ್ನೂ ಏನನ್ನೂ ಹೇಳಿಲ್ಲ ಯಾಕೆ? ಎಂದು ಇನ್ನೊಬ್ಬ ಕೇಳಿದ. ಒಂದೆರಡು ನಿಮಿಷ ಸುಮ್ಮನೆ ಇದ್ದ ಪ್ರಭುದೇವ, ಏನು ಹೇಳಲಪ್ಪ? ಎರಡೂ ಮಾಧ್ಯಮಗಳು ಬೇರೆ. ಕಥೆ ನನ್ನದು, ಸಿನಿಮಾ ನಿರ್ದೇಶಕನದು. ಕಥೆಯಲ್ಲಿ ಕೆಲವು ಬದಲಾವಣೆ ಮಾಡಿಕೊಳ್ತೀನಿ ಎಂದು ಮೊದಲೇ ಹೇಳಿದ್ದರು. ನಾನು ಇನ್ನೂ ಸಿನಿಮಾ ನೋಡಿಲ್ಲ. ಚೆನ್ನಾಗಿ ಓಡ್ತಿದೆ ಅಂತ ಪೇಪರುಗಳಲ್ಲಿ ಬಂದಿದೆ. ಇಷ್ಟರಲ್ಲೇ ಒಟಿಟಿಗೆ ಬರುತ್ತೆ ಎಂದು ನನ್ನ ಮಗ ಹೇಳಿದ. ಬಂದರೆ ನೋಡ್ತೀನಿ...’ ಎಂದರು.

ಹುಡುಗರು ಹೋದ ಮೇಲೆ ಮೃತ್ಯುಂಜಯ ನೆನಪಾದ! ರಾತ್ರಿ ಊಟಕ್ಕೆ ಕೂತಾಗ ಅವನಿಗೆ ಫೋನ್ ಮಾಡಬೇಕು ಅಂದುಕೊಂಡರು. ಊಟ ಮುಗಿಯುವ ಹೊತ್ತಿಗೆ ಮರೆತರು. ಮರುದಿನ ಪೇಪರ್ ಓದುವಾಗ ನೆನಪಾಯಿತು. ಡೈರಿಯಲ್ಲಿ ಅವನ ನಂಬರ್ ಹುಡುಕಿ ಕಾಲ್ ಮಾಡಿದರು. ಫೋನ್ ಎತ್ತಿಕೊಂಡ ಮೃತ್ಯುಂಜಯ, ‘ಹೇಳಿ ಸಾರ್, ಏನು ತೀರ್ಮಾನ ಮಾಡಿದ್ರಿ? ಸೆಮಿನಾರ್ ಯಾವತ್ತು ಇಟ್ಟುಕೊಳ್ಳೋಣ...’ ಎಂದ. ಪ್ರಭುದೇವರಿಗೆ ಏನೂ




ಅರ್ಥವಾಗಲಿಲ್ಲ.

‘ನೀವು ಯಾವ ವಿಷಯ ಹೇಳ್ತಿದಿರಿ...?

ಸಾರ್, ನಿನ್ನೆ ಬೆಳಿಗ್ಗೆ ನಾನು ಫೋನ್ ಮಾಡಿದ್ದೆ. ಅಷ್ಟು ಬೇಗ ಮರೆತು ಹೋಯ್ತೇ? ಕೇಳಿದ.

‘ಸಾರಿ ಮೃತ್ಯುಂಜಯ, ಆತ್ಮಕಥೆ ಬರೀತಾ ಇದ್ದೀನ್ರಿ. ಅದರ ಯೋಚನೆಯಲ್ಲಿದ್ದೆ. ನೀವು ಏನು ಹೇಳಿದಿರಿ ಅನ್ನೋದು ಗೊತ್ತಾಗಲಿಲ್ಲ, ಸಾರಿ...’ ಎಂದರು.

ಪ್ರಭುದೇವರ ತಲೆ ಕೆಟ್ಟಿದೆ ಎಂದು ಕೆಲವರು ಮಾತಾಡಿಕೊಳ್ತಿರೋದು ನಿಜವಿರಬಹುದು ಎಂದು ಮೃತ್ಯುಂಜಯನಿಗೆ ಅನ್ನಿಸಿತು. ನಿನ್ನೆ ಹೇಳಿದ್ದ ವಿಷಯಗಳನ್ನೆಲ್ಲ ಮತ್ತೊಮ್ಮೆ ಸಾದ್ಯಂತ ವಿವರಿಸಿದ.

‘ಈಗ ಭಾಷಾಭಿವೃದ್ಧಿ ಇಲಾಖೆ ಮಂತ್ರಿ ಯಾರು? ಅವರ ಹೆಸರು ನೆನಪಾಗ್ತಿಲ್ಲ. ಅವರು ಯಾವ ಜಾತಿಯವರು...?’ ಪ್ರಭುದೇವ ಕೇಳಿದರು.

ಪ್ರಶಸ್ತಿ ನನಗೆ ಬರದಿದ್ದರೂ ಚಿಂತೆ ಇಲ್ಲ, ಅದು ಅರುಣಾದಾಸ್‌ಗೆ ಸಿಗಬೇಕ್ರಿ. ಕನ್ನಡದಲ್ಲಿ ಅವರು ಬರೆದಿರೋದು ಎರಡೇ ಕಾದಂಬರಿ. ಅದರಲ್ಲಿ ಒಂದು ದೀ ಬೆಸ್ಟ್. ಅವರ ಇಂಗ್ಲಿಷ್ ಕಾದಂಬರಿಗಳೂ